3

# ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು
## ಸರ್ವಸದಸ್ಯರ ಸಭೆಯ ನಡಾವಳಿ.

ದಿನಾಂಕ 3/01/2020 ರಂದು ಬೆಂಗಳೂರಿನ ಕಲಾಗ್ರಾಮದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಭಾಂಗಣದಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ಸರ್ವ ಸದಸ್ಯರ ಸಭೆಯ ನಡಾವಳಿ.

ಉಪಸ್ಥಿತರು: ಸರ್ವಶ್ರೀ / ಶ್ರೀಮತಿ

| | | |
|---|---|---|
| 1. | ಪ್ರೊ. ಭೀಮಸೇನ.ಆರ್. | ಅಧ್ಯಕ್ಷರು, ಕ.ನಾ.ಅ |
| 2. | ಎಮ್.ಕೆ.ಮಠ | ಸದಸ್ಯರು, ಕ.ನಾ.ಅ |
| 3. | ಪ್ರೇಮಾ ಬಾದಾಮಿ | ಸದಸ್ಯರು , ಕ.ನಾ.ಅ |
| 4. | ಪ್ರಭುದೇವ ಕಪ್ಪಗಲ್ಲು | ಸದಸ್ಯರು, ಕ.ನಾ.ಅ |
| 5. | ಶಿವಪ್ಪ ಭರಮಪ್ಪ ಅದರಗುಂಚಿ | ಸದಸ್ಯರು, ಕ.ನಾ.ಅ |
| 6. | ಜೆ.ಜೋಸೆಫ್ | ಸದಸ್ಯರು, ಕ.ನಾ.ಅ |
| 7. | ಎಂ.ಎಸ್.ಗುಣಶೀಲನ್ | ಸದಸ್ಯರು, ಕ.ನಾ.ಅ |
| 8. | ಕೆ.ಆರ್.ಪ್ರಕಾಶ್ | ಸದಸ್ಯರು, ಕ.ನಾ.ಅ |
| 9. | ಟಿ.ಸದಾಶಿವಯ್ಯ | ಸದಸ್ಯರು, ಕ.ನಾ.ಅ |
| 10. | ಹೆಚ್.ಎಂ.ನಾಗರಾಜರಾವ್ | ಸದಸ್ಯರು, ಕ.ನಾ.ಅ |
| 11. | ಯಶವಂತ ಸರದೇಶ ಪಾಂಡೆ | ಸದಸ್ಯರು, ಕ.ನಾ.ಅ |
| 12. | ವೈಜನಾಥ್ ಬಿರಾದಾರ | ಸದಸ್ಯರು, ಕ.ನಾ.ಅ |
| 13. | ಟಿ.ರಾಜಾರಾವ್ | ಸದಸ್ಯರು, ಕ.ನಾ.ಅ |
| 14. | ಬಲವಂತರಾವ್ ಪಾಟೀಲ್ | ಜಂಟಿ ನಿರ್ದೇಶಕರು, ಕ.ಸಂ.ಇ |
| 15. | ಕಲ್ಲೇಶಪ್ಪ. ಜಿ | ಅರ್ಥ ಸದಸ್ಯರು ಕ.ಸಂ.ಇ |
| 16. | ಡಾ.ಶೈಲಜಾ ಎ.ಸಿ | ರಿಜಿಸ್ಟ್ರಾರ್,ಕ.ನಾ.ಅ |

ಅನುಪಸ್ಥಿತರು

| | | |
|---|---|---|
| 1. | ವಿನೋದ ಅಂಬೇಕರ್ | ಸದಸ್ಯರು |

----

ಹಾಜರಿದ್ದ, ಎಲ್ಲಾ ಸರ್ವರನ್ನು ಅಕಾಡೆಮಿ ರಿಜಿಸ್ಟ್ರಾರ್, ಡಾ.ಶೈಲಜಾ ಎ.ಸಿ. ಅವರು ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಪ್ರೊ.ಭೀಮಸೇನ್.ಆರ್ ಅವರು ವಹಿಸಿಕೊಂಡು ಮುಂದಿನ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೋರಿದರು.

04.01.2020

4/1/2020

ಕಾರ್ಯಸೂಚಿ:

ಆಗಸ್ಟ್ 2019 ಡಿಸೆಂಬರ್ 2020 ರವರೆಗಿನ ಖರ್ಚುವೆಚ್ಚಗಳಿಗೆ ಅನುಮೋದನೆಗೆ ಸಭೆ ಅನುಮೋದನೆ ನೀಡಿತು.

**ಚಿಕ್ಕಬಳ್ಳಾಪುರ ಜಿಲ್ಲಾರಂಗಮಾಹಿತಿ ಬಗ್ಗೆ**

ದಿನಾಂಕ 16-12-2019ರಂದು ನಡೆದ ಸ್ಥಾಯಿಸಮಿತಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾರಂಗಮಾಹಿತಿಯ ಲೇಖಕರ ಸಂಭಾವನೆ ರೂ.15,000/- ನೀಡಲು ತೀರ್ಮಾನಿಸಲಾಗಿತ್ತು. ಈ ಸಂಬಂಧ ಬಂದ ಲೇಖಕರ ಮನವಿ ಪತ್ರವನ್ನು ಪರಿಶೀಲಿಸಿದ ಸಭೆಯು 100 ಪುಟಗಳ ಡಿಟಿಪಿಯೊಂದಿಗೆ ಅಲೈಮೆಂಟ್ ಮಾಡಿಸಿ, ನೀಡಲು 15,000/-ದ ಜೊತೆಗೆ ರೂ.5,000/- ಸೇರಿಸಿ ಒಟ್ಟು ರೂ.20,000/- ನೀಡಲು ಸಭೆ ತೀರ್ಮಾನಿಸಿತು. ಇದೇ ಮೊತ್ತವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬಳ್ಳಾರಿ ಜಿಲ್ಲೆ ಮತ್ತು ಕೊಡಗು ಜಿಲ್ಲಾರಂಗಮಾಹಿತಿ ಸಿದ್ಧಪಡಿಸುವ ಲೇಖಕರಿಗೂ ನೀಡಲು ಸಭೆ ಅನುಮತಿಸಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**

1.ಸುಹಾಸ್ ಗ್ರಾಫಿಕ್ಸ್ - ಬೆಂಗಳೂರು ಜಿಲ್ಲಾರಂಗಮಾಹಿತಿ, ಎಂ.ಎಸ್.ಗ್ರಾಫಿಕ್ಸ್ - ಸೊಲ್ಲಾಪುರ ಜಿಲ್ಲಾರಂಗಮಾಹಿತಿ ಮತ್ತು ಚಾರುಮತಿ ಪ್ರಕಾಶನ - ಗೋಪಾಲಕೃಷ್ಣ ನಾಯರಿ ರಂಗಸಂಪನ್ನರು ಮಾಲಿಕೆಯಡಿ ಮುದ್ರಣಕಾರರ ಮುದ್ರಣ ವೆಚ್ಚದ ಪಾವತಿಯ ಬಗ್ಗೆ ಚರ್ಚಿಸಿದ ಸಭೆಯು ಕಡಿಮೆ ದರಪಟ್ಟಿ ನೀಡಿರುವ ಸಂಸ್ಥೆಯ ದರದಂತೆ, ಮೂರು ಸಂಸ್ಥೆಯವರಿಗೆ ನಿಯಮಾನುಸಾರ ಪ್ರಕ್ರಿಯೆ ನಡೆಸಿ, ಹಣ ಪಾವತಿ ಮಾಡಲು ಸಭೆ ಅನುಮೋದನೆ ನೀಡಿತು.

2. ಚಿಕ್ಕಮಗಳೂರು ವೃತ್ತಿನಾಟಕೋತ್ಸವದ ಹಣದಲ್ಲಿ 6ಲಕ್ಷದಲ್ಲಿ ,5ಲಕ್ಷ ವೃತ್ತಿ ನಾಟಕೋತ್ಸವಕ್ಕೆ ಮತ್ತು ಒಂದು ಲಕ್ಷ ಗಾಂಧಿ-150 ಏಕಾಂಕ ಕಾರ್ಯಕ್ರಮಕ್ಕೆ ನೀಡುವುದಕ್ಕೆ ಸಭೆ ಅನುಮೋದನೆ ನೀಡಿತು.

3. ಒಂದು ವರ್ಷದಲ್ಲಿ ಅಕಾಡೆಮಿಯ ಒಂದು ಯೋಜನೆಯಲ್ಲಿ ಫಲಾನುಭವಿಗಳಾಗಿದ್ದ ಅಭ್ಯರ್ಥಿಗಳು, ಮತ್ತೇ ಯಾವುದೇ ಯೋಜನೆಯಲ್ಲಿ ಫಲಾನುಭವಿಗಳಾಗಲು ಅವಕಾಶ ನೀಡಬಾರದೆಂದು ಸಭೆ ಒಮ್ಮತದಿಂದ ತೀರ್ಮಾನಿಸಿತು.

4. ಕ್ರಿಯಾಯೋಜನೆಯಲ್ಲಿ ಹೊರರಾಜ್ಯ ನಾಟಕೋತ್ಸವಕ್ಕೆ ಮೀಸಲಟ್ಟಿರುವ ರೂ.3ಲಕ್ಷ ಮೊತ್ತದಲ್ಲಿ ಹೊರರಾಜ್ಯಕ್ಕೆ ಬದಲಾಗಿ ಕತಾರ್ ದೇಶದಲ್ಲಿ ಕತಾರ್ ಕನ್ನಡ ಸಂಘದ ಸಹಯೋಗದೊಂದಿಗೆ ಮಾರ್ಚ್ 27 ರಂದು 10 ಜನ ಇರುವ ಒಂದು ತಂಡದಿಂದ ನಾಟಕ ಪ್ರದರ್ಶನ ಮಾಡಲು ಸಭೆ ಅನುಮೋದಿಸಿತು.

ತಂಡಕ್ಕೆ ಸ್ಥಳೀಯ ಆತಿಥ್ಯ ಕತಾರ್ ಕನ್ನಡ ಸಂಘದವರು ನೀಡಲು ಒಪ್ಪಿರುವುದನ್ನು ಈ ಕಾರ್ಯಕ್ರಮದ ಸದಸ್ಯ ಸಂಚಾಲಕರಾದ ಶ್ರೀ ಯಶವಂತ ಸರದೇಶಪಾಂಡೆಯವರು ಸಭೆಯ ಗಮನಕ್ಕೆ ತಂದರು. ಮತ್ತು 10 ಜನರ ತಂಡ ಮತ್ತು ಸದಸ್ಯ ಸಂಚಾಲಕರ ವೀಸಾ ವ್ಯವಸ್ಥೆ ಮತ್ತು ವಿಮಾನದ ಪ್ರಯಾಣವೆಚ್ಚ ರೂ.3ಲಕ್ಷವನ್ನು ಅಕಾಡೆಮಿಯಿಂದ ಭರಿಸಲು ಮತ್ತು ಇದಕ್ಕೆ ಸರ್ಕಾರದಿಂದ ಅನುಮೋದನೆ ಪಡೆಯಲು ಸಭೆ ತೀರ್ಮಾನಿಸಿತು. ಈ ನಾಟಕೋತ್ಸವದ ತಂಡ, ನಾಟಕ, ನಿರ್ದೇಶನ, ಇತರೆ ಮಾಹಿತಿಗಳನ್ನು ಸದಸ್ಯ ಸಂಚಾಲಕರಾದ ಯಶವಂತ ಸರದೇಶಪಾಂಡೆ ಅವರಿಂದ ರಿಜಿಸ್ಟ್ರಾರ್ ಅವರು ಪಡೆದು, ಸರ್ಕಾರಕ್ಕೆ ಪತ್ರ ಬರೆಯುವಂತೆ ಕೋರಲಾಯಿತು. ಕಾರ್ಯಕ್ರಮ ಮುಗಿದ ನಂತರ ವೆಚ್ಚವನ್ನು ಆರ್.ಟಿ.ಜಿ.ಎಸ್ ಸಂಬಂಧಿತರ ಖಾತೆಗೆ ಪಾವತಿಸಲು ಸಭೆ ತೀರ್ಮಾನಿಸಿತು.

04.01.2020

4/1/2020

**5.ಮಾಸಾಶನ ಕಲಾವಿದರ ಗೈರುಹಾಜರಿ ಬಗ್ಗೆ :** ಬೆಳಗಾಂ ಜಿಲ್ಲೆಯ ಕಲಾವಿದರಾದ ಶ್ರೀ ಸಂಗಯ್ಯ ಹಿರೇಮಠ ಅವರು ವಿಕಲಚೇತನರಾಗಿದ್ದು, ಅಪರೇಶನ್ ಆಗಿರುವ ಕಾರಣ ನೀಡಿ, ಒಂದು ತಿಂಗಳು ಬೆಡ್‌ರೆಸ್ಟನಲ್ಲಿರುವಂತೆ ವೈದ್ಯರು ಸೂಚಿಸಿರುವ ಕಾರಣವನ್ನು ದೂರವಾಣಿ ಮುಖಾಂತರ ತಿಳಿಸಿದ್ದು, ದಿನಾಂಕ 4-01-2020ರಂದು ನಡೆಯುವ ಮಾಸಾಶನ ಸಂದರ್ಶನಕ್ಕೆ ಹಾಜರಾಗಲು ಸಾಧ್ಯವಾಗದ ಕಾರಣ ನೀಡಿ, ಬದಲಿ ವ್ಯವಸ್ಥೆಯನ್ನು ಮಾಡುವಂತೆ ಕೋರಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಇದನ್ನು ಪರಿಶೀಲಸಿದ ಸಭೆಯು ಬೆಳಗಾವಿ ಜಿಲ್ಲೆಯ ಸದಸ್ಯ ಸಂಚಾಲಕರಾದ ಶ್ರೀ ವಿನೋದ ಅಂಬೇಕರ್ ಅವರು ಕಲಾವಿದರ ಬಗ್ಗೆ ಪರಿಶೀಲಿಸಿ ಸಂಪೂರ್ಣ ಮಾಹಿತಿಯನ್ನು ದೃಢೀಕರಿಸಿ ನೀಡುವಂತೆ ಸಭೆ ನಿರ್ಧರಿಸಿತು. ಈ ಆಧಾರದಲ್ಲಿ ಸದರಿ ಕಲಾವಿದರು ಮಾಸಾಶನಕ್ಕೆ ಅರ್ಹರಾಗಿದ್ದಲ್ಲಿ, ಅಕಾಡೆಮಿಯಿಂದ ಶಿಫಾರಸ್ಸು ಮಾಡುವಂತೆ ತೀರ್ಮಾನಿಸಲಾಯಿತು.

**6. ಕಾರ್ಯಕ್ರಮಗಳಿಗೆ ಮುಂಗಡ ಹಣ ನೀಡುವ ಬಗ್ಗೆ**

ಲೆಕ್ಕಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದು, ಕರ್ನಾಟಕ ಆರ್ಥಿಕ ಸಂಹಿತೆಯ ಪ್ರಕಾರ ಅಕಾಡೆಮಿಯ ಕಾರ್ಯಕ್ರಮಗಳಿಗೆ ಯಾವುದೇ ಮುಂಗಡವನ್ನು ನೀಡುವಂತಿಲ್ಲವೆಂಬ ಅಂಶವನ್ನು ವಿವರಿಸಿದರು. ಕಾರ್ಯಕ್ರಮ ಮುಗಿದ ನಂತರ ವಿವಿಧ ವ್ಯವಸ್ಥೆಯನ್ನು ಒದಗಿಸಿದ ಸಂಸ್ಥೆಗೆ ಆರ್.ಟಿ.ಜಿ.ಎಸ್. ಮೂಲಕ ಹಣವನ್ನು ಪಾವತಿಸಬೇಕು, ಜಿ.ಎಸ್.ಟಿ ಹೊಂದಿರುವ ಸಂಸ್ಥೆಗಳಿಂದಲೇ ಸೇವೆಯನ್ನು ಪಡೆಯಬೇಕು ಎಂಬ ಅಂಶವನ್ನು ಸಭೆಗೆ ಸ್ಪಷ್ಟಪಡಿಸಿದರು . ರೂ.10,000/-ಕ್ಕೆ ಮೇಲ್ಪಟ್ಟ ಎಲ್ಲಾ ವೆಚ್ಚಕ್ಕೂ ಮೂರು ದರಪಟ್ಟಿಯನ್ನು ನಿಯಮಾನುಸಾರ ಪಡೆಯಬೇಕೆಂದು ತಿಳಿಸಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯಕ್ರಮಗಳು ನಡೆದಾಗ ಅಲ್ಲಿಯೇ ಆಹ್ವಾನಪತ್ರಿಕೆ, ಬ್ಯಾನರ್, ಕರಪತ್ರ, ಪ್ರಮಾಣಪತ್ರ ಮುದ್ರಿಸುವ ಸಂಬಂಧ ಚರ್ಚಿಸಲಾಗಿ, ಲೆಕ್ಕಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ, ರಿಜಿಸ್ಟ್ರಾರ್‌ರೊಂದಿಗೆ ಚರ್ಚಿಸಿ, ಕೆಲವು ಮಾರ್ಗಸೂಚಿಗಳನ್ನು ಸಿದ್ಧಪಡಿಸಿ, ಸದಸ್ಯರಿಗೆ ನೀಡುವ ಬಗ್ಗೆ ತಿಳಿಸಿದರು. ಸಭೆ ಇದಕ್ಕೆ ಅನುಮೋದಿಸಿತು. ಜಂಟಿ ನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ್ ಅವರು ಸಭೆಯಲ್ಲಿ ಉಪಸ್ಥಿತರಿದ್ದು, ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಅಧ್ಯಕ್ಷರು ಮತ್ತು ಸದಸ್ಯರದಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸುವ ಕರ್ತವ್ಯ ರಿಜಿಸ್ಟ್ರಾರ್ ಮತ್ತು ಸಿಬ್ಬಂದಿಯದ್ದಾಗಿರುತ್ತದೆ ಎಂದರು.

ಸದಸ್ಯರಾದ ಶ್ರೀ ಯಶವಂತ ಸರದೇಶಪಾಂಡೆ ಅವರು ಕಾರ್ಯಕ್ರಮಗಳಿಗೆ ಅಕಾಡೆಮಿ ಸಿಬ್ಬಂದಿಯನ್ನು ನಿಯೋಜಿಸುವಂತೆ ಕೋರಿದ್ದು, ಸಿಬ್ಬಂದಿಗಳ ಕೊರತೆ ಇರುವ ಕಾರಣ, ಸ್ಥಳೀಯ ಆತಿಥ್ಯ, ಅತಿಥಿಗಳ ಆಯ್ಕೆ, ಇತ್ಯಾದಿ ವಿಚಾರಗಳಲ್ಲಿ ಸದಸ್ಯ ಸಂಚಾಲಕರು, ರಿಜಿಸ್ಟ್ರಾರ್ ಅವರೊಂದಿಗೆ ಸಹಕರಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದರು.

ಅಕಾಡೆಮಿಯ ಸಿಬ್ಬಂದಿಗಳ ಕೆಲಸ ಹಂಚಿಕೆಯ ಪಟ್ಟಿಯನ್ನು ಸದಸ್ಯರಿಗೆ ನೀಡುವಂತೆ ಕೋರಿದರು. ಇದಕ್ಕೆ ರಿಜಿಸ್ಟ್ರಾರ್ ಸಮ್ಮತಿಸಿದರು.

**7. ಅಧ್ಯಕ್ಷರು & ಸದಸ್ಯರ ಕಾರ್ಯಾಗಾರಕ್ಕೆ ಬ್ಯಾಗ್ ನೀಡುವ ಬಗ್ಗೆ**

ಮಾನ್ಯ ಇಲಾಖಾ ನಿರ್ದೇಶಕರು ದಿನಾಂಕ 28-12-2019ರಂದು ಸಚಿವರು ಏರ್ಪಡಿಸಿರುವ ಅಧ್ಯಕ್ಷರು ಮತ್ತು ಸದಸ್ಯರ ಕಾರ್ಯಾಗಾರಕ್ಕೆ ಅಕಾಡೆಮಿಗಳಿಂದ ಕೊಡುಗೆ ನೀಡುವಂತೆ ಕೋರಿದ ಹಿನ್ನಲೆಯಲ್ಲಿ 125 ಬಟ್ಟೆಯ ಬ್ಯಾಗ್‌ಗಳನ್ನು ಸಿದ್ಧಪಡಿಸಿ, ವಿತರಿಸಿದ್ದು, ಈ ಸಂಬಂಧದ ಮೊತ್ತವನ್ನು ಅನಿರೀಕ್ಷಿತ ವೆಚ್ಚದ ಲೆಕ್ಕಶೀರ್ಷಿಕೆಯಡಿಯಲ್ಲಿ ಪಾವತಿಸಲು ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.

**8. ಇ- ಆಫೀಸ್ ಅನುಷ್ಠಾನಗೊಳಿಸುವ ಕುರಿತು**

ಮಾನ್ಯ ನಿರ್ದೇಶಕರ ಪತ್ರದಂತೆ ದಿನಾಂಕ 01-01-2020ರಿಂದ ಅಕಾಡೆಮಿಗಳಲ್ಲೂ ಇ-ಆಫೀಸ್ ಅನ್ನು ಅನುಷ್ಠಾನಗೊಳಿಸಲು ಸಭೆ ಅನುಮೋದಿಸಿತು.

04.01.2020

4/1/2020

**9.ಕನ್ನಡಸಿರಿ ವೆಬ್‌ಸೈಟ್‌ಗೆ ಅಕಾಡೆಮಿಗಳ ವೆಬ್‌ಸೈಟ್‌ನಲ್ಲಿ ಲಿಂಕ್ ಮಾಡುವ ಬಗ್ಗೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್‌ಸೈಟ್ ಕನ್ನಡಸಿರಿ.ಕೋ.ಇನ್ ಗೆ ಅಕಾಡೆಮಿಯ ವೆಬ್‌ಸೈಟ್ ಅನ್ನು ಲಿಂಕ್ ಮಾಡುವಂತೆ ಮಾನ್ಯ ನಿರ್ದೇಶಕರಿಂದ ಪತ್ರ ಬಂದಿದ್ದು, ಲಿಂಕ್ ಮಾಡಲು ಸಭೆ ಅನುಮೋದನೆ ನೀಡಿತು.

**10. ಹೈದ್ರಾಬಾದ್ ನಾಟಕೋತ್ಸವದ ದಿನಾಂಕ ಮತ್ತು ನಾಟಕದ ಬದಲಾವಣೆ ಬಗ್ಗೆ**

ದಿನಾಂಕ 7-2-2020 ರಿಂದ 9-2-2020 ರವರೆಗೆ ನಡೆಯಬೇಕಾಗಿದ್ದ ಹೊರರಾಜ್ಯ ನಾಟಕೋತ್ಸವದ ದಿನಾಂಕ 8-2-2020 ರಿಂದ 10-2-2020ರವರೆಗೆ ಮುಂದೂಡಲಾಗಿರುವುದನ್ನು ಮತ್ತು ಉದ್ಘಾಟನೆಯ ದಿನದಂದು ನಿಗದಿಯಾದ ನಾಟಕ " ಬೂಟು ಕಾಲಿನ ಸದ್ದು, ನಾಟಕದ ಬದಲಾಗಿ "" ರಾಷ್ಟ್ರಮಾತೆ ಅಹಲ್ಯಾಬಾಯಿ ಹೋಳ್ಕರ್ " ನಾಟಕವನ್ನು ಪ್ರದರ್ಶಿಸುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಇದಕ್ಕೆ ಸಭೆ ಅನುಮೋದನೆ ನೀಡಿತು.

**11. ದಾವಣಗೆರೆ ಶಿಬಿರದ ನಿರ್ದೇಶಕರ ಬದಲಾವಣೆ ಬಗ್ಗೆ**

ವಿಶೇಷಘಟಕ ಯೋಜನೆಯಡಿ ದಿನಾಂಕ 01-01-2020ರಿಂದ ದಾವಣಗೆರೆಯಲ್ಲಿ ನಡೆಯುತ್ತಿರುವ ತರಬೇತಿ ಕಾರ್ಯಾಗಾರದ ನಿರ್ದೇಶಕರಾಗಿ, ಈ ಹಿಂದೆ ನಿರ್ದೇಶಕರಾಗಲು ಸೂಚಿಸಿದ್ದ ಪ್ರದೀಪ್ ಮುಧೋಳ ಇವರ ಬದಲಿಗೆ ಶ್ರೀ ಎಸ್.ಎಸ್.ಸಿದ್ಧರಾಜು ಅವರು ಕಾರ್ಯನಿರ್ವಹಿಸುವುದನ್ನು ಮತ್ತು ಪ್ರದೀಪ್ ಮುಧೋಳ ಇವರು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುವುದನ್ನು ಸಭೆ ಅನುಮೋದಿಸಿತು.

12. ಗಿರಿಜನ ಉಪಯೋಜನೆಯ ಫೆಲೋಶಿಪ್ ಫಲಾನುಭವಿಯಾದ ಡಾ.ಪ್ರಕಾಶ.ಶಿವಮೊಗ್ಗ ಇವರು ವಿಷಯ ಬದಲಾವಣೆ ಮತ್ತು ಕಾಲಾವಕಾಶ ಕೋರಿ ಮನವಿ ಸಲ್ಲಿಸಿದ್ದು, ಮಾರ್ಗದರ್ಶಕರೊಂದಿಗೆ ಚರ್ಚಿಸಿ, ವಿಷಯವನ್ನು ಅಂತಿಮಗೊಳಿಸಿ, ಮಾರ್ಚ್ 2020ರೊಳಗೆ ಸಂಶೋಧನಾ ಪ್ರಬಂಧವನ್ನು ಸಲ್ಲಿಸುವಂತೆ ತಿಳಿಸಲು ಸಭೆ ಅನುಮೋದಿಸಿತು.

13.ಜನರಲ್ ಫೆಲೋಶಿಪ್ ಫಲಾನುಭವಿಯಾದ ಪಾರ್ವತಮ್ಮ,ಕನಕಗಿರಿ ಇವರು ತಮ್ಮ ತಂದೆ ಕ್ಯಾನ್ಸರ್ ರೋಗಿಯಾಗಿದ್ದು, ಅವರನ್ನು ನೋಡಿಕೊಳ್ಳುತ್ತಿರುವ ಕಾರಣದಿಂದ ಸಮಯದ ಅಭಾವವಿದ್ದು, 2018-19ನೇ ಸಾಲಿನ ಸಂಶೋಧನಾ ಪ್ರಬಂಧ ಸಲ್ಲಿಕೆಯ ಅವಧಿಯನ್ನು ವಿಸ್ತರಿಸಲು ಮನವಿ ಸಲ್ಲಿಸಿದ್ದು, ಮಾರ್ಚ್ 2020 ರವರೆಗೂ ಕಾಲಾವಕಾಶ ನೀಡಲು ಸಭೆ ಸಮ್ಮತಿಸಿತು.

14. ಹಾವೇರಿ ನಾಟಕೋತ್ಸವದ ತಂಡಗಳು ಮತ್ತು ರೂಪುರೇಷೆ ಬಗ್ಗೆ

ದಿನಾಂಕ 26-01-2020 ರಿಂದ 28-01-2020ರವರೆಗೆ ಹಾವೇರಿಯಲ್ಲಿ ನಡೆಯುವ ಪೌರಾಣಿಕ ನಾಟಕೋತ್ಸವಕ್ಕೆ ಮೂರು ತಂಡಗಳನ್ನು ಮತ್ತು ನಾಟಕಗಳನ್ನು ಸಭೆಯು ಈ ಕೆಳಗಿನಂತೆ ಆಯ್ಕೆ ಮಾಡಿ, ಅನುಮೋದಿಸಿತು. ಈ ನಾಟಕೋತ್ಸವದ ಖರ್ಚುವೆಚ್ಚಗಳನ್ನು ನಿಯಮಾನುಸಾರ ಭರಿಸಲು ಸಭೆ ಅನುಮೋದಿಸಿತು.

1. ಪಂಚಾಕ್ಷರ ಗವಾಯಿಗಳ ತಂಡ,ಶಿಗ್ಗಾವಿ- ರೇಣುಕಾಯಲ್ಲಮ್ಮ ನಾಟಕ
2. ಸಿದ್ದೇಶ್ವರ ಸಂಘ – ರಕ್ತರಾತ್ರಿ
3. ದುರ್ಗಾಪರಮೇಶ್ವರಿ ತಂಡ, ಗದಗ – ಹೇಮರೆಡ್ಡಿ ಮಲ್ಲಮ್ಮ

15.ರಂಗ ಕಲಾವಿದರ ವಿವಿಧ್ದೋದ್ದೇಶ ಸಂಘದ ಹೊಸ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬಂದು, ನಾಟಕ ಅಕಾಡೆಮಿಯ ಕೊಠಡಿಯನ್ನು ಮಾಸಿಕ ಬಾಡಿಗೆ ಆಧಾರದಲ್ಲಿ ಮುಂದುವರಿಸಲು ಮೌಖಿಕವಾಗಿ ಅಧ್ಯಕ್ಷರೊಂದಿಗೆ ಚರ್ಚಿಸಿದ್ದು, ಈ ವಿಷಯವನ್ನು ಸಭೆಗೆ ತಿಳಿಸಲಾಗಿ, ಈಗ ನೀಡುತ್ತಿರುವ ಮಾಸಿಕ ರೂ.2,250/- ರಿಂದ 2,500/-ಕ್ಕೆ ಬಾಡಿಗೆಯನ್ನು ಹೆಚ್ಚಿಸಿ, ಹೊಸ ಕಾರ್ಯಕಾರಿ ಸಮಿತಿಗೆ ಬಾಡಿಗೆ ನೀಡಲು ಸಭೆ ತೀರ್ಮಾನಿಸಿತು.

04.01.2020

4/1/2020

16. ನಾಟಕ ಅಕಾಡೆಮಿಯ ಸಹಸದಸ್ಯರಾಗಿ ಈ ಕೆಳಕಂಡ ಮೂವರ ಆಯ್ಕೆಯನ್ನು ಸಭೆಯು ಅನುಮೋದಿಸಿತು.

ಶ್ರೀಮತಿ ರಾಧಾ ಕೊಡಗು, ಕೊಡಗು ಜಿಲ್ಲೆ
ಶ್ರೀ ಪ್ರವೀಣ ಗಜಾನನ ರಾಥೋಡ್, ಕಲಬುರ್ಗಿ ಜಿಲ್ಲೆ
ಶ್ರೀ ರವೀಂದ್ರ ಅರಳಗುಪ್ಪೆ, ದಾವಣಗೆರೆ ಜಿಲ್ಲೆ

ಪ್ರಶಸ್ತಿ ಸಮಾರಂಭದ ಬಗ್ಗೆ

ದಿನಾಂಕ 16-12-2019ರಂದು ನಡೆದ ಸ್ಥಾಯಿಸಮಿತಿಯಲ್ಲಿ ರೂಪಿಸಿದ್ದ ವಾರ್ಷಿಕ ಪ್ರಶಸ್ತಿ ಸಂಬಂಧದ ಕೆಳಕಂಡ ನಿಯಮಗಳನ್ನು ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು.

1. ರಂಗಭೂಮಿಯಲ್ಲಿ ಕನಿಷ್ಠ 20 ವರ್ಷ ಸೇವೆ ಸಲ್ಲಿಸಿರಬೇಕು
2. ಯಾವುದೇ ಅಕಾಡೆಮಿಯಲ್ಲಿ ಯಾವುದೇ ಪ್ರಕಾರದಲ್ಲಿ ಪ್ರಶಸ್ತಿ ಪಡೆದವರನ್ನು ಪರಿಗಣಿಸುವಂತಿಲ್ಲ.
3. ವಾರ್ಷಿಕ ಪ್ರಶಸ್ತಿಗೆ 50 ವರ್ಷ ಮೇಲ್ಪಟ್ಟವರನ್ನು ಪರಿಗಣಿಸಬೇಕು.
4. ರಾಜ್ಯಪ್ರಶಸ್ತಿ ಹಾಗೂ ಸರ್ಕಾರದ ಯಾವುದೇ ಪ್ರಶಸ್ತಿಯನ್ನು ಪಡೆದವರನ್ನು ವಾರ್ಷಿಕ ಪ್ರಶಸ್ತಿಗೆ ಪರಿಗಣಿಸಬಾರದು.
5. ಗೌರವ ಪ್ರಶಸ್ತಿಗೆ 60 ವರ್ಷ ಮೇಲ್ಪಟ್ಟವರನ್ನು ಪರಿಗಣಿಸಬೇಕು.

ಪ್ರಶಸ್ತಿ ದಿನಾಂಕ, ಸ್ಥಳ, ರೂಪುರೇಷೆ, ಖರ್ಚುವೆಚ್ಚಗಳನ್ನು ಮುಂದಿನ ಸ್ಥಾಯಿಸಮಿತಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲು, ಪ್ರಶಸ್ತಿ ಫಲಕವಾಗಿ ನಟರಾಜ ವಿಗ್ರಹವನ್ನು ನೀಡುವಂತೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ರಿಜಿಸ್ಟ್ರಾರ್ ಅವರು ದಿನಾಂಕ 29-7-2019ರಂದು ನಡೆದ ಸರ್ವಸದಸ್ಯರ ಸಭೆಯಿಂದ ಹಿಡಿದು, 1-8-2019ರವರೆಗೆ ಅಕಾಡೆಮಿಯಲ್ಲಿ ಪ್ರಶಸ್ತಿ ಸಂಬಂಧ, ಮತ್ತು ನಾಮನಿರ್ದೇಶನದ ರದ್ಧತಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ಸಭೆಯ ಮುಂದೆ ಮಂಡಿಸಿದರು.

ಪ್ರಶಸ್ತಿ ಪುರಸ್ಕೃತರ ಪಟ್ಟಿ, ಕ್ರಿಯಾಯೋಜನೆ ಮತ್ತು ಇತರೆ ವಿಷಯಗಳನ್ನೊಳಗೊಂಡ ದಿನಾಂಕ 29-7-2019ರ ಸರ್ವಸದಸ್ಯರ ಸಭೆಯ ನಡಾವಳಿಗೆ ದಿನಾಂಕ 30-7-2019 ರಂದು ಬೆರಳಚ್ಚಿಸಿ, ಅಂದು ಸಹಿ ಹಾಕಿದ್ದು, ಅಧ್ಯಕ್ಷರು ಮತ್ತು ಸದಸ್ಯರ ನಾಮ ನಿರ್ದೇಶನಗಳು ರದ್ದಾಗಿದ್ದರಿಂದ ಪ್ರಶಸ್ತಿಯನ್ನು ಅಧಿಕೃತವಾಗಿ ಅಕಾಡೆಮಿಯಿಂದ ಘೋಷಿಸುವ ಸಂಬಂಧ ನಿರ್ದೇಶಕರ ಮಾರ್ಗದರ್ಶನವನ್ನು ಪಡೆದು, ಪ್ರಶಸ್ತಿಯ ಘೋಷಣೆಯನ್ನು ಮತ್ತು ಪ್ರಶಸ್ತಿಗೆ ಆಯ್ಕೆಯಾದವರಿಗೆ ಅಭಿನಂದನಾ ಪತ್ರವನ್ನು ಅಕಾಡೆಮಿಯಿಂದ ಬರೆದಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನಿಯಮಾನುಸಾರ ಕರ್ತವ್ಯ ನಿರ್ವಹಿಸಿದ್ದರೂ ಸಾಮಾಜಿಕ ಜಾಲತಾಣಗಳಲ್ಲಿ ರಿಜಿಸ್ಟ್ರಾರ್ ಅವರನ್ನು ಆರೋಪಿ ಸ್ಥಾನದಲ್ಲಿ ಇಟ್ಟು ಬಿಂಬಿಸುತ್ತಿರುವ ಬಗ್ಗೆ ರಿಜಿಸ್ಟ್ರಾರ್ ತೀರಾ ಬೇಸರವನ್ನು ವ್ಯಕ್ತಪಡಿಸಿದರು. ಅಕಾಡೆಮಿಯ ಅಂಗರಚನೆಯ ಪ್ರಕಾರ ಸರ್ವಸದಸ್ಯರು ಅನುಮೋದಿಸಿದ ಕಲಾವಿದರಿಗೆ ಪ್ರಶಸ್ತಿ ವಿತರಣಾ ಸಮಾರಂಭವನ್ನು ಏರ್ಪಡಿಸಿ, ಪುರಸ್ಕಾರವನ್ನು ನೀಡುವ ತಮ್ಮ ಕರ್ತವ್ಯದ ಬಗ್ಗೆ ತಿಳಿಸಿದರು. ಹಿಂದಿನ ಕಾರ್ಯಕಾರಿ ಸಮಿತಿಯ ಕ್ರಿಯಾಯೋಜನೆಯ ಹಲವು ಯೋಜನೆಗಳನ್ನು ಈ ಅವಧಿಯ ಸಮಿತಿಯು ಮುಂದುವರಿಸಿದ್ದು, ಹಿಂದಿನ ಸಮಿತಿ ಆಯ್ಕೆ ಮಾಡಿದ್ದ ಪ್ರಶಸ್ತಿ ಪಟ್ಟಿಯ ಬಗ್ಗೆ ಸರ್ವಸದಸ್ಯರ ಸಭೆ ತೀರ್ಮಾನ ತೆಗೆದುಕೊಳ್ಳಲು ಕೋರಿದರು.

[signature] 04.01.2020

[signature] 4.1.2020

ದಿನಾಂಕ 29-7-2019ರಂದು ಪ್ರಶಸ್ತಿ ಪುರಸ್ಕೃತರ ಆಯ್ಕೆಯಲ್ಲಿನ ಆಡಳಿತಾತ್ಮಕ ಲೋಪದೋಷಗಳ ಕುರಿತು ರೂಪಕಲಾನಿಕೇತನ, ಬೆಂಗಳೂರು ಸಂಸ್ಥೆಯವರು ಮಾನ್ಯ ನಿರ್ದೇಶಕರಿಗೆ ಪತ್ರ ಬರೆದಿದ್ದು, ಈ ಸಂಬಂಧ ಕ್ರಮಕೈಗೊಂಡು ವರದಿ ಮಾಡುವಂತೆ ನಿರ್ದೇಶಕರು, ರಿಜಿಸ್ಟ್ರಾರ್ ಅವರಿಗೆ ಪತ್ರ ಬರೆದಿರುವ ವಿಷಯವನ್ನು ಮತ್ತು ರೂಪಕಲಾನಿಕೇತನ ಬೆಂಗಳೂರು ಇವರ ಪತ್ರವನ್ನು ರಿಜಿಸ್ಟ್ರಾರ್ ಸಭೆಯ ಮುಂದೆ ಮಂಡಿಸಿದರು. ನಿಕಟಪೂರ್ವ ಅಧ್ಯಕ್ಷರಾದ ಜೆ.ಲೋಕೇಶ್ ಅವರು ತಮ್ಮ ಸಮಿತಿ ಆಯ್ಕೆ ಮಾಡಿದ್ದ ಕಲಾವಿದರಿಗೆ ಪ್ರಶಸ್ತಿಯನ್ನು ನೀಡಬೇಕೆಂದು ಇ-ಮೇಲ್ ಮೂಲಕ ಕಳುಹಿಸಿದ್ದ ಪತ್ರವನ್ನು ಸಭೆಯ ಮುಂದೆ ಇಡಲಾಯಿತು.

ಕಡತ ಸಂ: 24 ಪ್ರಶಸ್ತಿ 2019-20 ಟಿಪ್ಪಣಿಯಲ್ಲಿ ಆದೇಶಕ್ಕಾಗಿ ರಿಜಿಸ್ಟ್ರಾರ್ ಅವರು 29-7-2019ರಂದು ನಡೆದ ಸರ್ವಸದಸ್ಯರ ಸಭೆಯ ನಡಾವಳಿಯೊಂದಿಗೆ, ರೂಪ ಕಲಾನಿಕೇತನ(ರಿ) ಬೆಂಗಳೂರು ಇವರು ಪ್ರಶಸ್ತಿ ತಡೆಹಿಡಿಯುವಂತೆ ಕೋರಿ ನಿರ್ದೇಶಕರಿಗೆ ಬರೆದ ಪತ್ರವನ್ನು ನಿರ್ದೇಶಕರು ಅಕಾಡೆಮಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದ್ದು, ಈ ಬಗ್ಗೆ ಮಾರ್ಗದರ್ಶನಕ್ಕಾಗಿ ರಿಜಿಸ್ಟ್ರಾರ್ ಅವರು ಜಂಟಿ ನಿರ್ದೇಶಕರಿಗೆ ಕಡತವನ್ನು ಮಂಡಿಸಿದ್ದು, ಅವರು ಈ ಬಗ್ಗೆ ಮಾನ್ಯ ಅಧ್ಯಕ್ಷರ ಮಾರ್ಗದರ್ಶನವನ್ನು ಕೋರಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಶ್ರೀ ಬಲವಂತರಾವ್, ಜಂಟಿ ನಿರ್ದೇಶಕರು

ಕಳೆದ ಸಮಿತಿಯ ಪ್ರಶಸ್ತಿಯನ್ನು ಸಿಂಧುಗೊಳಿಸುವುದು, ಅಸಿಂಧುಗೊಳಿಸುವುದು, ತಮ್ಮ ಸಮಿತಿಯ ನಿರ್ಧಾರವೆಂದು ತಿಳಿಸಿದರು. ಪ್ರಸ್ತುತ ಸರ್ಕಾರದಿಂದ ನೇಮಕವಾದ ಅಕಾಡೆಮಿಯ ಸದಸ್ಯರು, ಅಧ್ಯಕ್ಷರಲ್ಲಿ ಕೋರಂ ಇದ್ದರೆ, ಸರ್ವಸದಸ್ಯರ ಸಭೆಯನ್ನು ನಡೆಸಲು ಯಾವುದೇ ತೊಂದರೆಯಿಲ್ಲವೆಂದು ತಿಳಿಸಿದರು.

ಈ ಹಿಂದಿನ ಸಮಿತಿಯು ಆಯ್ಕೆ ಮಾಡಿದ್ದ ಪ್ರಶಸ್ತಿ ಪುರಸ್ಕೃತರ ಪಟ್ಟಿಯ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ಪ್ರತಿಯೊಬ್ಬ ಸದಸ್ಯರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಪ್ರಶಸ್ತಿ ಸಂಬಂಧ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಮುನ್ನವೇ ನಿಕಟಪೂರ್ವ ಅಧ್ಯಕ್ಷರು ಮತ್ತು ಅವರ ತಂಡ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಹಿಂದಿನ ಪ್ರಶಸ್ತಿ ರದ್ದಾಗುವ ಬಗ್ಗೆ ಊಹಾಪೋಹಗಳನ್ನು ಸೃಷ್ಟಿಸಿ, ಹಾಲಿ ಅಕಾಡೆಮಿಯ ಅಧ್ಯಕ್ಷರು ಮತ್ತು ಸರ್ವಸದಸ್ಯರು ಮತ್ತು ರಿಜಿಸ್ಟ್ರಾರ್ ಹಾಗೂ ಇಡೀ ಅಕಾಡೆಮಿಯ ಬಗ್ಗೆ ಆರೋಪಗಳನ್ನು ಹೊರಿಸಿದ್ದು, ಇದನ್ನು ಸರ್ವಸದಸ್ಯರು ತೀವ್ರವಾಗಿ ಖಂಡಿಸಿದರು. ಸಾಮಾನ್ಯವಾಗಿ ಡಿಸೆಂಬರ್‌ನಲ್ಲಿ ಪ್ರಶಸ್ತಿಗೆ ಆಯ್ಕೆಮಾಡಿ, ಜನವರಿ, ಫೆಬ್ರವರಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳುವುದು ವಾಡಿಕೆ. ಆದರೆ, ಹಿಂದಿನ ಸಮಿತಿಯು ವರ್ಷದ ಮೊದಲ ಸರ್ವಸದಸ್ಯರ ಸಭೆಯಲ್ಲಿ ಪ್ರಶಸ್ತಿಯನ್ನು ಆಯ್ಕೆ ಮಾಡಿದ್ದು, ಸರ್ಕಾರ ಪತನಗೊಳ್ಳುವ ಸಂಭವವಿದ್ದುದ್ದರಿಂದಲೇ ತರಾತುರಿಯಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ. ಅಲ್ಲದೆ, ವಿಶೇಷಘಟಕ ಮತ್ತು ಗಿರಿಜನ ಉಪಯೋಜನೆಯಂತಹ ಅನುದಾನಗಳನ್ನು ಬಳಸುವ ಬಗ್ಗೆ ಕಾರ್ಯಯೋಜನೆ ರೂಪಿಸದೇ ಮೊದಲ ಸರ್ವಸದಸ್ಯರ ಸಭೆಯಲ್ಲೇ ಪ್ರಶಸ್ತಿಗೆ ಆದ್ಯತೆ ನೀಡಿರುವುದನ್ನು ಸರ್ವಸದಸ್ಯರ ಸಭೆಯು ವಿರೋಧಿಸಿತು. ಹಾಲಿ ಸದಸ್ಯರಿಗೆ ವೈಯಕ್ತಿಕವಾಗಿ ಕರೆ ಮಾಡಿ, ಸಭೆ ಮುಂದೂಡಿಕೆಯಾಗಿದೆ ಎಂದು ದಿಕ್ಕು ತಪ್ಪಿಸುವ ಪ್ರಯತ್ನ ನಡೆದಿರುವುದನ್ನು ಸದಸ್ಯರು ಸಭೆಯ ಗಮನಕ್ಕೆ ತಂದರು. ಮುಂದೆ ಬರುವ ಎಲ್ಲಾ ಅಕಾಡೆಮಿ ಸಮಿತಿಗಳಿಗೆ ಈ ನಡವಳಿಕೆ ಮುಂದಿನ ವರ್ಷಗಳಲ್ಲಿ ತಪ್ಪು ಪರಂಪರೆಯಾಗಬಾರದೆಂದು ಸಭೆ ಆಗ್ರಹಿಸಿತು. ಈ ಎಲ್ಲಾ ಅಂಶಗಳನ್ನು ಪರಾಮರ್ಶಿಸಿದ ಸರ್ವಸದಸ್ಯರ ಸಭೆಯು ಒಕ್ಕೊರಲಿಂದ ಅಂತಿಮವಾಗಿ ಹಿಂದಿನ ಪ್ರಶಸ್ತಿ ಪಟ್ಟಿಯ ಬದಲಾಗಿ ಈ ಕೆಳಕಂಡಂತಿರುವ ಹೊಸ ಆಯ್ಕೆ ಪಟ್ಟಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

04.01.2020

4.1.2020

## 2019-20ನೇ ಸಾಲಿನ ಪ್ರಶಸ್ತಿ ಪಟ್ಟಿ

1. ಜೀವಮಾನದ ಸಾಧನೆ ಪ್ರಶಸ್ತಿ:
   ಶ್ರೀಮತಿ ಜಿ.ವಿ.ಶಾರದಾ.ಬೆಂಗಳೂರು

ಕರ್ನಾಟಕ ರಂಗಭೂಮಿಗೆ ದೀರ್ಘಕಾಲ ಸೇವೆಸಲ್ಲಿಸಿ. ರಂಗಭೂಮಿಯ ಘನತೆ ಗೌರವಗಳನ್ನು ಹೆಚ್ಚಿಸಲು ಕಾರಣರಾದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಈ ಪ್ರಶಸ್ತಿಯೊಂದಿಗೆ ಪ್ರಶಸ್ತಿ ಫಲಕ. ಶಾಲು. ಹಾರ. ಪ್ರಶಸ್ತಿ ಪತ್ರ ಹಾಗೂ ರೂ.50,000/-ಗಳ ನಗದು ಪುರಸ್ಕಾರವು ಸೇರಿರುತ್ತದೆ.

**2.ಅಕಾಡೆಮಿ ವಾರ್ಷಿಕ ರಂಗಪ್ರಶಸ್ತಿ:**

ರಂಗಭೂಮಿ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸುತ್ತಾ ಬಂದಿರುವ ಮಹನೀಯರನ್ನು ಕರ್ನಾಟಕ ನಾಟಕ ಅಕಾಡೆಮಿ ಗುರುತಿಸಿ. ಅಂತಹವರಿಗೆ ವಾರ್ಷಿಕ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಈ ಪ್ರಶಸ್ತಿಯೊಂದಿಗೆ ಪ್ರಶಸ್ತಿ ಫಲಕ. ಶಾಲು. ಹಾರ. ಪ್ರಶಸ್ತಿ ಪತ್ರ ಹಾಗೂ ರೂ.25,000/-ಗಳ ಪುರಸ್ಕಾರವು ಸೇರಿರುತ್ತದೆ.

1. ಶ್ರೀ ಪರಮೇಶ್ವರ್ ಲೆಂಡೆ, ನಿಂಬಾಳ, ಕಲಬುರಗಿ.
2. ಶ್ರೀ ಜಕೀರ್ ನದಾಫ್, ಬೆಳಗಾಂ
3. ಶ್ರೀ ನಾಗೇಂದ್ರ ಶಾ, ಬೆಂಗಳೂರು
4. ಶ್ರೀ ಕೆ.ಪಿ.ಪ್ರಕಾಶ್, ಬೆಂಗಳೂರು ಗ್ರಾಮಾಂತರ
5. ಡಾ.ಎಂ.ಬೈರೇಗೌಡ, ರಾಮನಗರ
6. ಶ್ರೀಮತಿ ಶಾಂತಮ್ಮ ಬಿ ಮಲಕಲ್, ಹಂಸನೂರು, ಬಾಗಲಕೋಟೆ
7. ಶ್ರೀಮತಿ ಮಂಜುಳಾ ಮಂಜುನಾಥ್, ತುಮಕೂರು
8. ಶ್ರೀ ಮಾಲೂರು ಸಿದ್ಧಪ್ಪ, ಕೋಲಾರ
9. ಶ್ರೀ ಗಣಪತಿ ಬಿ ಹೆಗಡೆ ಹಿತ್ಲಕ್ಕೈ, ಉತ್ತರ ಕನ್ನಡ
10. ಶ್ರೀ ಜಂಬುನಾಥ್, ಚಿತ್ರದುರ್ಗ
11. ಶ್ರೀ ಸಿದ್ಧಲಿಂಗಪ್ಪ, ತುಮಕೂರು
12. ಶ್ರೀ ಬಿ.ಎಲ್.ರವಿಕುಮಾರ್. ಚಿಕ್ಕಮಗಳೂರು
13. ಶ್ರೀ ನಾಗರಾಜಗೌಡ, ಶಿವಮೊಗ್ಗ
14. ಶ್ರೀ ಶಾಡ್ರಾಕ, ಹಾಸನ
15. ಶ್ರೀ ವಿಜಯಕುಮಾರ್ ಕೋಡಿಯಾಲ್ ಬೈಲ್, ಮಂಗಳೂರು
16. ಶ್ರೀ ಭಾಸ್ಕರ, ಮಣಿಪಾಲ, ಉಡುಪಿ
17. ಶ್ರೀ ಸಂಗಮೇಶ ಬಾದಾಮಿ, ವಿಜಯಪುರ
18. ಶ್ರೀ ಶಶಿಪ್ರಭಾ ಆರಾಧ್ಯ, ಹುಬ್ಬಳ್ಳಿ

4/1/2020

02.01.2020

19. ಶ್ರೀ ಮಧುಕುಮಾರ ಹರಿಜನ, ಹಾವೇರಿ

20. ಶ್ರೀ ಗುರುನಾಥ್ ಕೋಟೆ ಜೀರ್ಗಾ, ಬೀದರ್

21. ಶ್ರೀ ರಮೇಶ ಹಂಚಿನಮನಿ,ಬಳ್ಳಾರಿ

22. ಶ್ರೀ ಚನ್ನಬಸವನಗೌಡ ಪಾಟೀಲಕುಲಕರ್ಣಿ, ಧಾರವಾಡ

23. ಶ್ರೀ ಬಿ.ಎನ್.ಶಶಿಕಲಾ, ಮೈಸೂರು

24. ಡಾ.ಎಂ.ಎಸ್.ವೇಣುಗೋಪಾಲ, ಮೈಸೂರು

25. ಶ್ರೀ ಬಸವರಾಜ ಹೆಸರೂರು, ಕೊಪ್ಪಳ

3. ಅಕಾಡೆಮಿಯ ದತ್ತಿ ಪ್ರಶಸ್ತಿಗಳು

ಅ. ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರಪ್ರಶಸ್ತಿ:

ಶ್ರೀ ಮಲ್ಲಿಕಾರ್ಜುನ .ಬಿ, ಚಿತ್ರದುರ್ಗ

ಕನ್ನಡ ರಂಗಭೂಮಿಯ ಖ್ಯಾತ ರಂಗನಟ, ಮಾಸ್ಟರ್ ಹಿರಣ್ಣಯ್ಯನವರು ತಮ್ಮ ತಂದೆ ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ಇವರ ಹೆಸರಿನಲ್ಲಿ ದತ್ತಿ ಪುರಸ್ಕಾರ ನೀಡಲು ದತ್ತಿ ನಿಧಿ ನೀಡಿರುತ್ತಾರೆ. ಈ ಪ್ರಶಸ್ತಿಯನ್ನು ವೃತ್ತಿರಂಗಭೂಮಿಯ ನಟ, ನಟಿ, ನಿರ್ದೇಶಕರು, ನಾಟಕಕಾರರು, ನೇಪಥ್ಯ ಕಲಾವಿದರು ಮತ್ತು ಸಂಸ್ಥೆಗೆ ಈ ಪ್ರಶಸ್ತಿಯನ್ನು ನೀಡುವುದು ಆನಂತರ ಹವ್ಯಾಸಿ ರಂಗಭೂಮಿಯನ್ನು ಪರಿಗಣಿಸುವುದು. ಈ ಪುರಸ್ಕಾರದ ಮೊತ್ತ ರೂ.5,000/-, ಪ್ರಶಸ್ತಿ ಫಲಕ, ಶಾಲು, ಹಾರ, ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

ಆ. ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ ಪ್ರಶಸ್ತಿ :

ಶ್ರೀ ನಾಮದೇವ ನೂಲಿ, ಬೆಳಗಾವಿ

ಕನ್ನಡ ರಂಗಭೂಮಿಯ ಖ್ಯಾತ ನಟ, ನಿರ್ದೇಶಕ, ಮಾಲೀಕರು ಆದ ಚಿಂದೋಡಿ ವೀರಪ್ಪ ಅವರ ಮಗ ಚಿಂದೋಡಿ ಬಂಗಾರೇಶ ಅವರು ಅಕಾಡೆಮಿಗೆ ದತ್ತಿ ನೀಡಿರುತ್ತಾರೆ. ವೃತ್ತಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಒಬ್ಬ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪುರಸ್ಕಾರದ ಮೊತ್ತ ರೂ.5,000/-, ಪ್ರಶಸ್ತಿ ಫಲಕ, ಶಾಲು, ಹಾರ, ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

ಇ. ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ ಪ್ರಶಸ್ತಿ :

ಶ್ರೀಮತಿ ಕೋಮಲಮ್ಮ ಕೊಟ್ಟೂರು,ಬೆಂಗಳೂರು

ಕನ್ನಡ ರಂಗಭೂಮಿಯ ಖ್ಯಾತ ನಟಿ, ಮಾಲೀಕರು ಆದ ಚಿಂದೋಡಿ ಲೀಲಾ ಅವರ ಮಗ ಚಿಂದೋಡಿ ಚಂಧ್ರದರ ಅವರು ಅಕಾಡೆಮಿಗೆ ದತ್ತಿ ನೀಡಿರುತ್ತಾರೆ. ವೃತ್ತಿರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಒಬ್ಬ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪುರಸ್ಕಾರದ ಮೊತ್ತ ರೂ.5,000/-, ಪ್ರಶಸ್ತಿ ಫಲಕ, ಶಾಲು, ಹಾರ, ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

04.01.2020

4/1/2020

ಈ ಕೆ.ರಾಮಚಂದ್ರಯ್ಯ ದತ್ತಿನಿಧಿ ಪುರಸ್ಕಾರ:

**ಶ್ರೀ ಅರವಿಂದ ಕುಲಕರ್ಣಿ, ಧಾರವಾಡ**

ವೃತ್ತಿರಂಗಭೂಮಿಯ ಕಲಾವಿದರಾದ ಶ್ರೀ ಕೆ.ರಾಮಚಂದ್ರಯ್ಯನವರ ಅವರ ಮಗಳಾದ ಶ್ರೀಮತಿ ಕೆ.ಆರ್.ಸುಮತಿ ಅವರು ಅಕಾಡೆಮಿಗೆ ದತ್ತಿ ನೀಡಿರುತ್ತಾರೆ. ಹವ್ಯಾಸಿರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಒಬ್ಬ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪುರಸ್ಕಾರದ ಮೊತ್ತ ರೂ.5,000/-, ಪ್ರಶಸ್ತಿ ಫಲಕ, ಶಾಲು, ಹಾರ, ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

ರಿಜಿಸ್ಟ್ರಾರ್ ವಂದನೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯವಾಯಿತು

04.01.2020
(ಪ್ರೊ.ಭೀಮಸೇನ.ಆರ್)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

(ಡಾ.ಶೈಲಜಾ ಎ.ಸಿ) 4/1/2020
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ